ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು – 560083
OFFICE OF THE DEPUTY CONSERVATOR OF FORESTS, BANNERGHATTA NATIONAL PARK, BENGALURU – 560 083
ದೂರವಾಣಿ: 080-29755405, E-Mail ID: dcfbnp83@gmail.com

ಸಂಖ್ಯೆ:ಎ5/ಬರಾಉ/ಭೂಮಿ/BDA7.91 Ha/ಸಿಆರ್-/2020-21 |1091 ದಿನಾಂಕ:29.11.2022

ರವರಿಗೆ,

Executive Engineer,
Infrastructure Division,
BDA, Bangalore.
Nadaprabhukempegowda layout Division

ಮಾನ್ಯರೆ,

ವಿಷಯ: Request for issue of Suitability Certificate for the identified CA Land Sy No.156 (36 A-10 G) in Mantapa Village, Jigani Hobli and Anekal Taluk for the proposed Nadaprabhu Kempegowda layout (NPKL) Project (Proposal No.:FR/KAROAD/41495/2019) which is passing through Sulikere Reserve Forest reg.

ಉಲ್ಲೇಖ:
1. ನಿಮ್ಮ ಕಛೇರಿ ಪತ್ರ ಸಂಖ್ಯೆ: BDA/EE(NPKL)/275/2021-22, Dated: 25.11.2021.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ ರವರ ಕಛೇರಿ ಪತ್ರ ಸಂಖ್ಯೆ:ಉಅಸಂ/ಬೆ.ಗ್ರಾ.ವಿ./ಸಿ.ಎ./ಜಿ.ಎಲ್-382/2022-23/03, ದಿನಾಂಕ:05.11.2022.
3. ಈ ಕಛೇರಿ ಪತ್ರ ಸಂಖ್ಯೆ:ಎ5/ಬರಾಉ/CA-Land/ಸಿ.ಆರ್-/2020-21/223, ದಿನಾಂಕ: 07.06.2022.

-*-*-*-*-

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರ (1) ರಲ್ಲಿ ನಾಡಪ್ರಭು ಕೆಂಪೇಗೌಡ ಲೇಔಟ್ ರಸ್ತೆಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಪ್ರಸ್ತಾವನೆಗೆ ಅರಣ್ಯ (ಸಂರಕ್ಷಣೆ) ಕಾಯ್ದೆ-1980 ರ ಪ್ರಕಾರ ಗೇಣಿ ಗುತ್ತಿಗೆ ಆಧಾರದ ಮೇಲೆ ಭೂ ಸ್ವಾಧೀನ ಮಾಡಿಕೊಳ್ಳುತ್ತಿರುವ ಸಂಬಂಧವಾಗಿ ಪರಿಹಾರಾತ್ಮ ನೆಡುತೋಪು ಬೆಳೆಸುವ ಅರಣ್ಯಕ್ಕಾಗಿ ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಂಟಪ ಗ್ರಾಮದ ಸರ್ವೆ ನಂ.156 ರಲ್ಲಿ 2.41 ಹೆಕ್ಟೇರ್ ಪ್ರದೇಶವನ್ನು ಗುರುತಿಸಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು ವಿಭಾಗಕ್ಕೆ ನೀಡಿರುವುದರಿಂದ, ಸದರಿ ಪ್ರದೇಶದಲ್ಲಿ ಈಗಾಗಲೇ ಕಗ್ಗಲಿ, ಅಕೇಶಿಯ, ಬಿದಿರು, ನೀಲಗಿರಿ ಹಾಗೂ ಇತರೆ ಜಾತಿಯ ಹಲವು ಮರಗಳು ಇದ್ದು, ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸುದ್ದಹಳ್ಳ ಲ್ಯಾಕ್ ರಿಸರ್ವ್ ಹಾಗೂ ಬನ್ನೇರುಘಟ್ಟ ಲ್ಯಾಕ್ ರಿಸರ್ವ್ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುತ್ತದೆ.

ಪು.ತಿ.ನೋ.

ಈ ಪ್ರದೇಶದಲ್ಲಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಆನೆ, ಜಿಂಕೆ, ಕಡವೆ ಮತ್ತು ಚಿರತೆ ಹಾಗೂ ಇತ್ಯಾದಿ ವನ್ಯಜೀವಿಗಳ ಚಲನ-ವಲನ ಸಾಮಾನ್ಯವಾಗಿರುತ್ತದೆ. ಆದ್ದರಿಂದ ಸದರಿ ಪ್ರದೇಶದಲ್ಲಿ ನೈಸರ್ಗಿಕವಾಗಿ ಬೆಳೆದಿರುವ ಹಲವಾರು ಮರಗಳು ಇರುವುದರಿಂದ ಮತ್ತೊಮ್ಮೆ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಅವಶ್ಯಕತೆ ಕಂಡುಬರುವುದಿಲ್ಲ. ಆದ್ದರಿಂದ, ಸದರಿ ಪ್ರಸ್ತಾವನೆಗೆ ಪರಿಹಾರಾತ್ಮಕ ನೆಡುತೋಪು ಬೆಳಸಲು 2.41 ಹೆಕ್ಟೇರ್ ಡಿ-ಗ್ರೇಡ್ ಅರಣ್ಯ ಪ್ರದೇಶವನ್ನು ಬೆಂಗಳೂರು ಗ್ರಾಮಾಂತರ ವಿಭಾಗದ ವ್ಯಾಪ್ತಿಯಲ್ಲಿರುವ ದೊಡ್ಡಬಳ್ಳಾಪುರ ವಲಯದ ಸಾಸಲು ಹೋಬಳಿ, ಕಲ್ಲುಕುಂಟೆ ಗ್ರಾಮದ ಸರ್ವೆ ನಂ.10 ರಲ್ಲಿ ಡಿ-ಗ್ರೇಡ್ ಅರಣ್ಯ ಪ್ರದೇಶವನ್ನು ಗುರುತಿಸಿ KML File ಮತ್ತು ಜಿ.ಪಿ.ಎಸ್.ರೀಡಿಂಗ್‌ನೊಂದಿಗೆ ಗ್ರಾಮ ನಕಾಶೆಯಲ್ಲಿ ಗುರುತಿಸಿ, ಪರಿಹಾರಾತ್ಮಕ ನೆಡುತೋಪು ಬೆಳೆಸಲು C.A. Scheme Details ಗಳೊಂದಿಗೆ ಈ ಕಛೇರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ಬೆಂಗಳೂರು ರವರು ಸಲ್ಲಿಸಿರುತ್ತಾರೆ.

ಸದರಿ ನಾಡ ಪ್ರಭು ಕೆಂಪೇಗೌಡ ಲೇಔಟ್ (Nada Prabhu Kempegowda layout) ಪ್ರಸ್ತಾವನೆಗೆ ಸೂಲಿಕೆರೆ ಮೀಸಲು ಅರಣ್ಯ ಪ್ರದೇಶದಲ್ಲಿ 2.41 ಹೆಕ್ಟೇರ್ ಪ್ರದೇಶಕ್ಕೆ ಬದಲಾಗಿ, C.A. Land ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಮಂಟಪ ಗ್ರಾಮದ ಸರ್ವೆ ನಂ.156 ರಲ್ಲಿ 2.41 ಹೆಕ್ಟೇರ್ ಜಮೀನನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ, ಬೆಂಗಳೂರು ವಿಭಾಗಕ್ಕೆ ನೀಡಿರುವುದರಿಂದ, ಸದರಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಬೆಂಗಳೂರು ಗ್ರಾಮಾಂತರ ವಿಭಾಗದ, ದೊಡ್ಡಬಳ್ಳಾಪುರ ವಲಯದಲ್ಲಿ 2.41 ಹೆಕ್ಟೇರ್ ಡಿ-ಗ್ರೇಡ್ ಅರಣ್ಯ ಪ್ರದೇಶವನ್ನು ನೀಡಿರುವುದರಿಂದ ಪರಿಹಾರಾತ್ಮಕ ನೆಡುತೋಪು ಬೆಳೆಸುವ ಪ್ರದೇಶಕ್ಕೆ Suitablity Certificate, Village Map, Topo Map ಮತ್ತು C.A. Scheme Details ನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ನಿಮಗೆ ಕಳುಹಿಸಲಾಗಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ
ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ
ಬೆಂಗಳೂರು.